

# ಗಂಭೀರ ಕಾಯಿಲೆಗಳಿಗೂ ಹೋಮಿಯೋಪತಿ ಪರಿಹಾರ

ಕ್ಯಾನ್ಸರ್‌ನಂಥ ಮಾರಣಾಂತಿಕ ಕಾಯಿಲೆಯಿಂದ ಬಳಲಿದ ಅದೆಷ್ಟೋ ಮಂದಿ ಹೋಮಿಯೋಪತಿ ಔಷಧಿಯಿಂದ ಗುಣ ಕಂಡಿದ್ದಾರೆ. ನಂಬಿಕೆ ಮತ್ತು ಆತ್ಮವಿಶ್ವಾಸದ ಜತೆಗೆ ಬದುಕಿನ ಯಾವುದೇ ಸವಾಲುಗಳನ್ನು ಎದುರಿಸಬಲ್ಲೆ ಎಂಬ ಛಲ ಇದ್ದರೆ ಎಷ್ಟೇ ಗಂಭೀರ ಕಾಯಿಲೆ ಬಂದರೂ ವ್ಯಕ್ತಿ ಎದ್ದು ಸುಖವಾಗಿ ಓಡಾಡಬಹುದು..!

■ ಉಮಾ ಅನಂತ್

ಅದು 1999ರ ಜೂನ್ ತಿಂಗಳು, ಆ ಯುವ ದಂಪತಿ ಮಧ್ಯಪ್ರದೇಶದಿಂದ ಸುಮಾರು ಒಂದೂವರೆ ವರ್ಷದ ಮಗುವನ್ನು ಎತ್ತಿಕೊಂಡು ಬೆಂಗಳೂರಿಗೆ ಬಂದಿದ್ದರು. ಬಸವನಗುಡಿಯಲ್ಲಿರುವ ಆ ಪುಟ್ಟ ಹೋಮಿಯೋಪತಿ ಆಸ್ಪತ್ರೆಗೆ ಬಂದಾಗ ಆ ಮಗುವಿನಲ್ಲಿ ಕಣ್ಣು ಅಲ್ಲಾಡಿಸುವುದನ್ನು ಬಿಟ್ಟರೆ ಬೇರೆ ಯಾವ ಚಲನೆಯೂ ಇರಲಿಲ್ಲ. ಆ ರಾಜ್ಯದ ತಜ್ಞ ವೈದ್ಯರು ಮಗು ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆ ಕುಂಠಿತ ಎಂದು, ಇನ್ನೇನೂ ಮಾಡಲಾಗದು ಎಂದು ಕೈಚೆಲ್ಲಿದ್ದರು. ಐವಿಎಫ್ (ಪ್ರನಾಶ ಶಿಶು) ತಂತ್ರಜ್ಞಾನದಿಂದ ಹುಟ್ಟಿದ ಮಗು ಅದಾಗಿದ್ದು ದಂಪತಿಗೆ ಮಗುವನ್ನು ಉಳಿಸಿಕೊಳ್ಳುವ ತವಕ, ಗುಣವಾಗುವುದೋ ಎಂಬ ಆತಂಕ, ಆದರೂ ಎಲ್ಲೋ ಒಂದು ಕಡೆ ಮಗು ಗುಣವಾಗೇ ಆಗುತ್ತದೆ ಎಂಬ ಆಶಾಕಿರಣ.

ಮಗು ಹುಟ್ಟಿದ 12 ಗಂಟೆಯ ಬಳಿಕ ರಕ್ತವಾಂತಿ ಮಾಡಿಕೊಳ್ಳುತ್ತಿತ್ತು. ಇದು ಮಾರಣಾಂತಿಕ ಸಮಸ್ಯೆ ಎಂದು ಮಗುವಿಗೆ ರಕ್ತ ಕೊಡಿಸಿದ್ದರು. ಮಗುವಿನ ತೂಕ ಕೇವಲ 1.6 ಕೇಜಿ ಇತ್ತು. ಮಗು ಗರ್ಭದಲ್ಲಿದ್ದ ಮೂರನೇ ತಿಂಗಳಿನಿಂದ ಬೆಳವಣಿಗೆ ಕುಂಠಿತವಾದದ್ದು ಇದಕ್ಕೆ ಕಾರಣ. ಇಲ್ಲಿ ಚಿಕಿತ್ಸೆಗೆ ಕರೆ ತಂದಾಗ ಒಂದೂವರೆ ವರ್ಷದ ಮಗುವಿಗಿರಬೇಕಾದ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಇರಲಿಲ್ಲ. ನೆತ್ತಿಯೂ ಕೂಡಿರಲಿಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ತಲೆಯ ಸ್ಕ್ಯಾನ್ ಮಾಡಿಸುತ್ತಿದ್ದರು. ಮಗು ಬದುಕಲು ಬಹಳ ತ್ರಾಸ ಪಡುತ್ತಿತ್ತು. ಇಂಥ ಸ್ಥಿತಿಯಲ್ಲಿ ಹೋಮಿಯೋಪತಿ ಚಿಕಿತ್ಸೆ ಆರಂಭಿಸಲಾಯಿತು. ಆರು ತಿಂಗಳಲ್ಲಿ ಮಗು ನಗಲಾರಂಭಿಸಿತು. ಮತ್ತೆ ಆರು ತಿಂಗಳಲ್ಲಿ ಮಗು ನಡೆಲಾರಂಭಿಸಿತು. ತೂಕ ಹೆಚ್ಚಿತು. ಎರಡು ವರ್ಷದ ಸತತ ಚಿಕಿತ್ಸೆಯ ಬಳಿಕ ಮಗು ಮಾತನಾಡಲಾರಂಭಿಸಿತು. ದೂರದ ಮಧ್ಯಪ್ರದೇಶದಿಂದ ಬೆಂಗಳೂರಿಗೆ ಆರು ತಿಂಗಳಿಗೊಮ್ಮೆ ಬಂದು ಚಿಕಿತ್ಸೆ ಪಡೆಯುತ್ತಿದ್ದ ಮಗು 10 ವರ್ಷದ ಹೊತ್ತಿಗೆ ಸಂಪೂರ್ಣವಾಗಿ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಕಂಡಿತು. ಮಗು 12 ವರ್ಷವಾಗುವಾಗ ವಯೋಸಹಜ ನಡವಳಿಕೆಗೆ ಶುರು ಮಾಡಿದಳು. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.76 ಅಂಕ ಪಡೆದು ಪಾಸಾದಳು. ಕಥಕ್ ನೃತ್ಯವನ್ನೂ ಕಲಿಯಲಾರಂಭಿಸಿದಳು. ತೀವ್ರ ಬುದ್ಧಿಮಾಂದ್ಯತೆಯಿಂದ, ದೈಹಿಕ ಅಶಕ್ತತೆಯಿಂದ ಬಳಲುತ್ತಿದ್ದ ಮಗು ಎಲ್ಲರಂತವಳಾದದ್ದು ಹೋಮಿಯೋಪತಿ ಚಿಕಿತ್ಸೆ ಹಾಗೂ ಮಗುವಿನ ತಾಯಿಯ ಮನೋಸ್ಥೈರ್ಯದ ಪರಿಣಾಮ.

* * *

ಅದು 2012ರ ಜನವರಿ ತಿಂಗಳು. ಒಂದು ದಿನ ಒಬ್ಬ ವ್ಯಕ್ತಿಯನ್ನು ನಾಲ್ಕು ಜನ ಹೊತ್ತುಕೊಂಡು ಬೆಂಗಳೂರಿನ ಅಶ್ವಿನಿ ಹೋಮಿಯೊ ಕ್ಲಿನಿಕ್‌ಗೆ ಬಂದರು. ಕನಕಪುರ ಸಮೀಪದ ಹಳ್ಳಿಯಿಂದ ಬಂದ ಅವರು ಪ್ರತಿಷ್ಠಿತ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆದು ಅಲ್ಲಿನ ವೈದ್ಯರು ಅಸಹಾಯಕರಾಗಿ ಡಿಸ್ಚಾರ್ಜ್ ಮಾಡಿದ ಮೇಲೆ ಇಲ್ಲಿಗೆ ಬಂದಿದ್ದರು. ಇಷ್ಟು ಸೀರಿಯಸ್ ಆಗಿರುವ ರೋಗಿಗೆ ಚಿಕಿತ್ಸೆ ನೀಡುವುದು ಹೇಗೆ ಎಂಬ ಚಿಂತೆ ಹೋಮಿಯೋಪತಿ ವೈದ್ಯರದು. ಅಕ್ಯೂಟ್ ಮೈಯಲೈಡ್ ಲ್ಯುಕೇಮಿಯಾದಿಂದ ಆತ ಬಳಲುತ್ತಿದ್ದ.

